

ಇಳಿದು ಹೋಗಲು ಮಾರ್ಗ ರಚನೆಯಾಗಿದೆ.

ಕ್ರಿ.ಪೂ.27ನೇ ಶತಮಾನಕ್ಕೆ ಸೇರಿದ ಸಕ್ಕಾರದ ಸ್ಟೆಪ್ ಪಿರಮಿಡ್ ಬಳಿ ದೊರಕಿದ ಜೋಸರ್ ರಾಜನ ಪ್ರತಿಮೆ ಮ್ಯೂಸಿಯಂನಲ್ಲಿರುವ ಪುರಾತನ ವಸ್ತುಗಳಲ್ಲೊಂದು.

ಪಿರಮಿಡ್ ನಿರ್ಮಾತೃಗಳಾದ ಮೈಸೀರಿನಸ್ ಮತ್ತು ಖುಫೂ ರಾಜರ ಪ್ರತಿಮೆಗಳು, 4,600 ವರ್ಷಗಳ ಹಿಂದಿನ ರಾಜಕುಮಾರ ರಾಹೋಟೆಪ್ ಮತ್ತು ರಾಜಕುಮಾರಿ ನೊಫ್ರೆಟ್ ಪ್ರತಿಮೆಗಳು, ಗೋರಿಯಲ್ಲಿನ ವಸ್ತುಗಳು, ಮೂರನೇ ತುಟ್ಮೋಸ್ ಮತ್ತು ಹಟ್ಷೆಪ್ಸುಟ್ ರಾಣಿಯ ಸುಂದರ ಪ್ರತಿಮೆಗಳು, ಅಂಧಶ್ರದ್ಧೆಯನ್ನು ಧಿಕ್ಕರಿಸಿ ತನ್ನದೇ ರಾಜಧಾನಿ ಸ್ಥಾಪಿಸಿದ್ದ ಫೆರೋ ಅಖೆನತೆನ್ ಮತ್ತು ಆತನ ಪತ್ನಿ ಸುಂದರಿ ನೆಫರ್ಟಿಟಿ ಕಾಲದ ವಸ್ತುಗಳು... ಸಾಕಷ್ಟು ಅಪರೂಪದ ವಸ್ತುಗಳಿವೆ. ಇಲ್ಲಿರುವ ಸಂಗ್ರಹಗಳ ಮಹತ್ವ, ಬರುವ ಪ್ರವಾಸಿಗರ ಪ್ರವಾಹ ನೋಡಿದರೆ ಈ ಮ್ಯೂಸಿಯಂ ಈಗಿರುವುದರ ನಾಲ್ಕು ಪಟ್ಟು ದೊಡ್ಡದಿರಬೇಕೆನಿಸುತ್ತದೆ. ಇಡೀ ದಿನ ಮ್ಯೂಸಿಯಂನಲ್ಲಿ ಕಳೆದರೂ ಇತಿಹಾಸದ ವಿದ್ಯಾರ್ಥಿಗೆ ಮನಸ್ಸು ತುಂಬುವಷ್ಟು ಆಹಾರ ಇಲ್ಲಿದೆ.

ಮೊದಲ ಮಹಡಿಯಲ್ಲಿ ಟೂಟಾಂಖ್ ಅಮುನ್ ಗ್ಯಾಲರಿ, ರಾಯಲ್ ಮಮ್ಮೀಸ್, ಪ್ರಾಣಿಗಳ ಮಮ್ಮಿಗಳು ವಿಶೇಷವಾದದ್ದು.

## ಟೂಟಾಂಖ್ ಅಮುನ್

ಟೂಟಾಂಖ್ ಅಮುನ್ ಈಜಿಪ್ಟ್‌ನ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿರುವ ಹೆಸರು. ಹಾಗೆ ನೋಡಿದರೆ ಈ ಫೆರೋ ಅಂತಹ ಪ್ರಸಿದ್ಧ ರಾಜನೇನೂ ಆಗಿರಲಿಲ್ಲ. ಅವನ ಆಡಳಿತದ ಬಗ್ಗೆ ವಿಶೇಷ ಮಾಹಿತಿ ಕೂಡ ಸಿಗುವುದಿಲ್ಲ. ತೀರಾ ಚಿಕ್ಕ ವಯಸ್ಸಿಗೆ ತನ್ನ ಒಂಬತ್ತನೇ ವಯಸ್ಸಿನಲ್ಲಿ ಸಿಂಹಾಸನವೇರಿ ಹದಿನೆಂಟನೇ ವಯಸ್ಸಿಗೆ ಸಾವನ್ನಪ್ಪಿದ. ಕೇವಲ ಒಂಬತ್ತು ವರ್ಷದ ಅವನ ಆಳ್ವಿಕೆ ಮಹತ್ವದ್ದಲ್ಲ. ಆದರೆ ಮಹತ್ವರವಾದದ್ದು ಆತನ ಗೋರಿ. ಕಳ್ಳರ ಕಣ್ಣು ತಪ್ಪಿಸಿಕೊಂಡು 20ನೇ ಶತಮಾನದ ಆದಿಭಾಗದಲ್ಲಿ ಪುರಾತತ್ವಜ್ಞರಿಗೆ ಪೂರ್ಣಪ್ರಮಾಣದಲ್ಲಿ ದೊರಕಿದ ಈ ಗೋರಿ ಇತಿಹಾಸ ನಿರ್ಮಿಸಿತು. ಟೂಟಾಂಖ್ ಅಮುನ್ ಗೋರಿಯಲ್ಲಿ ಅಭೂತಪೂರ್ವವಾದ ಸಿರಿಸಂಪತ್ತುಗಳು ದೊರಕದೆ ಇದ್ದಿದ್ದರೆ ಜಗತ್ತು ಅವನ ಹೆಸರನ್ನು ಕೇಳುತ್ತಲೇ ಇರಲಿಲ್ಲವೇನೋ!

1922ರಲ್ಲಿ ಹೊವಾರ್ಡ್ ಕಾರ್ಟರ್ ಎಂಬ ಪುರಾತಜ್ಞರು ರಾಜರ ಕಣಿವೆಯಲ್ಲಿ ರಾಮ್ಸೆಸ್‌ನ ಗೋರಿಯ ಆಸುಪಾಸಿನಲ್ಲಿ ಉತ್ಖನನ ನಡೆಸಿದ್ದರು. ನಾಲ್ವಡಿ ರಾಮ್ಸೆಸ್ ಗೋರಿಯಿಂದ ಸ್ವಲ್ಪ ಮುಂದೆ ಈವರೆಗೆ ಯಾರ ಕಣ್ಣಿಗೂ ಬೀಳದ ಕಟ್ಟಡದ ಅವಶೇಷ ಕಾಣಿಸಿತು. ಅದನ್ನು ಕೆದಕಿದಾಗ ಕೆಳಗೆ ಇಳಿದು ಹೋಗಲು ಮೆಟ್ಟಿಲುಗಳು, ಇಕ್ಕೆಲೆಗಳಲ್ಲಿ ರಾಜನ ಅಂತಿಮ ಯಾತ್ರೆಗೆ ಸಂಬಂಧಿಸಿದ ಚಿತ್ರಗಳು ಕಂಡವು. ಅದರ ಅಂಚಿನಲ್ಲಿ ಮುಚ್ಚಿದ ಬಾಗಿಲು ಕಾಣಿಸಿತು. ಅದರ ಮೇಲೆ ಫೆರೋ ಟೂಟಾಂಖ್ ಅಮುನ್ ರಾಜಮುದ್ರೆ ಇತ್ತು.

ಈ ಕೊಠಡಿಗಳ ಬಾಗಿಲನ್ನು ಒಡೆದಾಗ, ಕೋಣೆಯ ತುಂಬಾ ಅನೇಕ ವಸ್ತುಗಳು ರಾಶಿರಾಶಿಯಾಗಿ ಬಿದ್ದಿರುವುದು ಕಂಡುಬಂದಿತು. ರಾಜ ಮಲಗುತ್ತಿದ್ದ ಹಂಸತೂಲಿಕಾತಲ್ಪ ಆ ಕೋಣೆಯ ಒಂದು ಗೋಡೆಯಿಂದ ಮತ್ತೊಂದು ಗೋಡೆಯವರೆಗೆ ಹರಡಿತ್ತು. ಕೋಣೆಯ ಪ್ರವೇಶ ದ್ವಾರದ ಸನಿಹದಲ್ಲೇ ಮತ್ತೊಂದು ಬಾಗಿಲು, ಅದರ ಪಕ್ಕ ದ್ವಾರಪಾಲಕರಂತೆ ನಿಂತ ಎರಡು, ಎತ್ತರದ ಚಿನ್ನದ ಲೇಪವಿದ್ದ ಟೂಟಾಂಖ್ ಅಮುನ್ ಪ್ರತಿಕೃತಿಗಳಿದ್ದವು. ಆ ಮೂರ್ತಿಗಳ ಹಿಂದಿದ್ದ ಬಾಗಿಲನ್ನು ಬಿಡಿಸಿದಾಗ ಒಂದರೊಳಗೊಂದು ಮೂರು ಬೃಹದಾಕಾರದ ಮನೆಯಾಕಾರದ ಪೆಟ್ಟಿಗೆಗಳಿದ್ದವು. ಆ ಪೆಟ್ಟಿಗೆಗಳಿಗೆ ತಳವಿಲ್ಲ. ಐದು ಕಡೆಯ ಕಟ್ಟಡ. ಅವುಗಳ ಮೇಲೆಲ್ಲಾ ಚಿತ್ರಗಳು. ಚಿನ್ನದ ಲೇಪ. ಆ ಮೂರು ಮನೆಯಾಕಾರದ ಪೆಟ್ಟಿಗೆಗಳನ್ನು ಒಂದೊಂದಾಗಿ ಎತ್ತಿದಾಗ ತೀರಾ ಒಳಗೆ ಚಿನ್ನದ ಶವಪೆಟ್ಟಿಗೆ ಇತ್ತು. ಅದನ್ನು ಫೆರೋನ ದೇಹದ ಆಕಾರದಲ್ಲಿ ರೂಪಿಸಲಾಗಿತ್ತು.

ಆ ಶವಪೆಟ್ಟಿಗೆಯಲ್ಲಿ ಟೂಟಾಂಖ್ ಅಮುನ್ ಮಮ್ಮಿಯಿತ್ತು. ಆತನ ಮುಖಕ್ಕೆ ಚಿನ್ನದ ಮುಖವಾಡವನ್ನು ಅಂಟಿಸಲಾಗಿತ್ತು. ಶವದ ಮೈಮೇಲೆಲ್ಲಾ ಆಭರಣಗಳಿದ್ದವು. ಆತನ ಎದೆಯ ಮೇಲೆ ಒಸೈರಿಸ್ ದೇವತೆಯ ಚಿಹ್ನೆಯುಳ್ಳ ಚಿನ್ನದ ಪದಕಗಳಿದ್ದವು.

ಈ ಭವ್ಯ, ಅಗಾಧ ಭಂಡಾರದ ಜೊತೆಗೆ ಟೂಟಾಂಖ್ ಅಮುನ್ ಸಿಂಹಾಸನ, ಕುರ್ಚಿ, ಪಾದುಕೆ, ಕೈಗೌಸು ಸೇರಿದಂತೆ ನೂರಾರು ಅಮೂಲ್ಯ ವಸ್ತುಗಳಿದ್ದವು.